ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು) :

ಅ) ಅರಣ್ಯ ಇಲಾಖೆಯಲ್ಲಿ 2000 ರ ಸಾರ್ವತ್ರಿಕ ವರ್ಗಾವಣೆಯಲ್ಲಿ ಈ ಕೆಳಕಂಡ ವೃಂದಗಳಲ್ಲಿ ವರ್ಗಾವಣೆ ಮಾಡಿದ ಸಂಖ್ಯೆ ಅವುಗಳ ಮುಂದೆ ತೋರಿಸಲಾಗಿದೆ.

ಉಪ ಅರಣ್ಯ ಸಂಕ್ಷಣಾಧಿಕಾರಿ (ರಾಜ್ಯ ಅರಣ್ಯ ಸೇವೆ)	18
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ರಾಜ್ಯ ಅರಣ್ಯ ಸೇವೆ)	123
ವಲಯ ಅರಣ್ಯ ಅಧಿಕಾರಿ	204

ಆ) ಮೇಲಿನಂತೆ

ಇ) ಈ ಸಾಲಿನ ಸಾರ್ವತ್ರಿಕ ವರ್ಗಾವಣೆಯಲ್ಲಿ ಮೇಲಿನ ವೃಂದಗಳಿಗೆ ವರ್ಗಾವಣೆಗೆ ಕುರಿತು 143 ಶಾಸಕರುಗಳು ಶಿಫಾರಸ್ಸು ಪತ್ರಗಳನ್ನು ನೀಡಿರುತ್ತಾರೆ. 1966ರ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿಗಳ ನಿಯಮ 26 ರನ್ವಯ ಇವುಗಳನ್ನು ಮಾನ್ಯ ಮಾಡಲು ಆಸ್ಪದವಿರುವುದಿಲ್ಲ.

ರಾಜ್ಯದಲ್ಲಿ ಜಲ ಹಾಗೂ ವಾಯು ಮಾಲಿನ್ಯ ತಡೆಗಟ್ಟುವುದು

4340(4990) ಶ್ರೀ ಪಾಟೀಲ್ ಡಿ.ಆರ್. (ಗದಗ) : ಮಾನ್ಯ ವಾರ್ತಾ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಜಲ ಹಾಗೂ ವಾಯು ಮಾಲಿನ್ಯ ಮಾಡುವ ಬೃಹತ್ ಉದ್ಯಮಗಳು ಯಾವುವು :

ಆ) ಈ ಉದ್ದಿಮೆಗಳು ಜನ ಜೀವನದ ಮೇಲೆ ಆಗಾಧ ಪರಿಣಾಮ ಬೀರದಂತೆ ಜಲ ಹಾಗೂ ವಾಯು ಮಾಲಿನ್ಯ ಮಾಡದಿರಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು :

ಇ) ಗದಗ ಹಾಗೂ ಮುಂಡರಗಿ ತಾಲ್ಲೂಕಿನ ದೊಡ್ಡ ಪ್ರಮಾಣದ ಜನ ಸಂಖ್ಯೆಗೆ ಕುಡಿಯುವ ನೀರು ಒದಗಿಸುವ ತುಂಗಭದ್ರಾ ನದಿಯ ನೀರನ್ನು ಮಲಿನ ಮಾಡುವ ಉದ್ಯಮಗಳು ಯಾವುವು :

ಈ) ಈ ಜಲ ಹಾಗೂ ವಾಯು ಮಾಲಿನ್ಯ ತಡೆಗಟ್ಟಲು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಉ) ಇನ್ನಾದರೂ ಈ ಜಲ ಹಾಗೂ ವಾಯು ಮಾಲಿನ್ಯ ತಡೆಗಟ್ಟಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಆದೇಶ ನೀಡಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಅಲ್ಲಂ ವೀರಭದ್ರಪ್ಪ (ವಾರ್ತಾ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಅಲ್ಯೂಮಿನಿಯಂ, ರಸಗೊಬ್ಬರ, ಸಕ್ಕರೆ, ಕಬ್ಬಿಣ ಮತ್ತು ಉಕ್ಕು, ರಿಫೈನರಿ, ಫಾರ್ಮಸಿಟಿಕಲ್, ಸಿಮೆಂಟ್, ಪಲ್ಪಿ ಮತ್ತು ಕಾಗದ, ರಾಸಾಯನಿಕ ವಸ್ತು ತಯಾರು ಮಾಡುವ ಕಾರ್ಖಾನೆಗಳು ಹಾಗೂ ಡಿಸ್ಟಿಲರಿಗಳು, ಶಾಖೋತ್ಪನ್ನ ಘಟಕಗಳು ರಾಜ್ಯದಲ್ಲಿ ಮಾಲಿನ್ಯ ಮಾಡತಕ್ಕಂಥ ಬೃಹತ್ ಉದ್ಯಮಗಳಾಗಿವೆ.

ಆ) ಈ ಉದ್ದಿಮೆಗಳು ಜಲ ಮತ್ತು ವಾಯು ಮಾಲಿನ್ಯ ಮಾಡದಿರಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕೆಳಗಿನ ಕ್ರಮಗಳನ್ನು ಕೈಗೊಂಡಿದೆ.

ಉದ್ದಿಮೆಗಳಿಂದ ಹೊರಬರುವ ಕಲುಷಿತ ನೀರನ್ನು ಹಾಗೂ ವಾಯು ಮಾಲಿನ್ಯ ಕಾರಕಗಳನ್ನು ಮಂಡಳಿಯು ನಿಗಧಿಪಡಿಸಿರುವ ಗುಣ ಮಾನಕಕ್ಕೆ ಶುದ್ದೀಕರಿಸಲು

ಷರತ್ತುಗಳನ್ನು ವಿಧಿಸಿ ಸಮ್ಮತಿ ನೀಡಲಾಗುತ್ತಿದೆ. ಈ ದಿಸೆಯಲ್ಲಿ ಉದ್ದಿಮೆಗಳು ಸೂಕ್ತ ಮಾಲಿನ್ಯ ನಿಯಂತ್ರಣ ಘಟಕಗಳನ್ನು ಹಾಗೂ ಸಂಸ್ಕರಣಾ ಸ್ಥಾವರಗಳನ್ನು ಅಳವಡಿಸಿರುತ್ತವೆ.

ಆಪಾಯಕಾರಿ ತ್ಯಾಜ್ಯ ವಸ್ತುಗಳನ್ನು ವೈಜ್ಞಾನಿಕವಾಗಿ ಶೇಖರಿಸಲು / ಮರುಬಳಕೆ ಮಾಡಲು ಉದ್ದಿಮೆಗಳಿಗೆ ಸಮ್ಮತಿ ನೀಡಲಾಗುತ್ತಿದೆ ಹಾಗೂ ಈ ಸಂಬಂಧ ಒಂದು ಸಂಯುಕ್ತ ಆಪಾಯಕಾರಿ ತ್ಯಾಜ್ಯವಸ್ತು ವಿಲೇವಾರಿ ಕೇಂದ್ರ ಸ್ಥಾಪಿಸಲು ಕ್ರಮ ಜರುಗಿಸಲಾಗುತ್ತಿದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕಳೆದ ಮೂರು ವರ್ಷಗಳಲ್ಲಿ ಜಲ ಮತ್ತು ವಾಯು ಕಾಯ್ದೆ ಅಡಿಯಲ್ಲಿ 78 ಉದ್ದಿಮೆಗಳ ಮೇಲೆ ಕ್ರಮ ಜರುಗಿಸಿರುತ್ತದೆ.

ವರ್ಷವಾರು ವಿವರಗಳು :

1. ಮುಚ್ಚುವ ಆದೇಶ :

ವರ್ಷ	ಉದ್ದಿಮೆಗಳ ಸಂಖ್ಯೆ
2000–2001	34
2001–2002	7
2002–2003	23

2. ಕ್ರಿಮಿನಲ್ ಕೇಸುಗಳು ಮತ್ತು ಕ್ರಿಮಿನಲ್ ಇತರೆ :

ವರ್ಷ	ಉದ್ದಿಮೆಗಳ ಸಂಖ್ಯೆ
2000	2
2001	5
2002	7

ನದಿ ನೀರಿನ ಗುಣ ಮಟ್ಟವನ್ನು 55 ಸ್ಥಳಗಳಲ್ಲಿ ಮಾಪನ ಮಾಡಲಾಗುತ್ತಿದೆ.

ನಗರಗಳಲ್ಲಿ ಪರಿವೇಷ್ಟಕ ವಾಯುವಿನ ಗುಣವನ್ನು 31 ಕಡೆ ಮಾಪನ ಮಾಡಲಾಗುತ್ತಿದೆ.

ಪರಿಸರ ಸಂರಕ್ಷಣೆ ಕುರಿತು ಜಾಗೃತಿ ಕಾರ್ಯ ಕ್ರಮಗಳನ್ನು ನಡೆಸಲಾಗುತ್ತಿದೆ.

ಸಾರ್ವಜನಿಕರಿಗೆ ಮತ್ತು ಸರ್ಕಾರೇತರ ಸಂಸ್ಥೆಗಳಿಗೆ ತರಬೇತಿ ನೀಡಲಾಗುತ್ತಿದೆ.

ಇ) ಗದಗ ಹಾಗೂ ಮುಂಡರಗಿ ತಾಲ್ಲೂಕಿಗೆ ಕುಡಿಯುವ ನೀರು ಒದಗಿಸುವ ತುಂಗಾಭದ್ರಾ ನದಿಯ ನೀರನ್ನು ಮಾಲಿನ್ಯ ಮಾಡುವ ಉದ್ಯಮಗಳು ಯಾವುದೂ ಇರುವುದಿಲ್ಲ.

ತುಂಗಭದ್ರ ನದಿಯ ಎಡದಂಡೆಯಲ್ಲಿ ಮೆ: ಹರಿಹರ ಫಾಲಿಪೈಬರ್ಸ ಹಾಗೂ ಎ. ಗ್ರಾಸಿಮ್ ಉದ್ದಿಮೆಗಳು ಸ್ಥಾಪಿತವಾಗಿದ್ದು, ಮಂಡಳಿಯು ನಿಗದಿಪಡಿಸಿರುವಂತೆ ಕಲುಷಿತ ನೀರನ್ನು ಶುದ್ದೀಕರಿಸಿ ನದಿಗೆ ವಿಸರ್ಜಿಸುತ್ತಿವೆ. ಈ ಉದ್ದೆಮೆಗಳು ಗದಗ ಹಾಗೂ ಮುಂಡರಗಿ ತಾಲ್ಲೂಕಿನ ಕುಡಿಯುವ ನೀರು ಪಂಪ್ ಮಾಡುವ ಸ್ಥಳದಿಂದ ಸುಮಾರು 110 ಕಿ.ಮೀ. ನಷ್ಟು ಮೇಲ್ಭಾಗದಲ್ಲಿ ಇದೆ.

ಈ) ಇಲ್ಲ. ಸಮ್ಮತಿಯ ನಿಬಂದನೆಗಳನ್ನು ಉಲ್ಲಂಘಿಸಿದ ಪ್ರಕರಣಗಳಲ್ಲಿ ಕಾನೂನು ಕ್ರಮ ಜರುಗಿಸಲಾಗುತ್ತಿದೆ.

ಇ) ಕಾನೂನು ಉಲ್ಲಂಘನೆ ಕಂಡು ಬಂದ ತಕ್ಷಣ ಅಧಿಕಾರಿಗಳಿಗೆ ಕ್ರಮ ಜರುಗಿಸಲು ಈಗಾಗಲೇ ಆದೇಶ ನೀಡಲಾಗಿದೆ.